<u>ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಅರುಣ್ ಡಿ.ಎಸ್. ಅವರು ಭೋವಿ ಅಭಿವೃದ್ಧಿ ನಿಗಮದಲ್ಲಿ ನಡೆದಿರುವ ಅವ್ಯವಹಾರದ ಬಗ್ಗೆ ಸೂಕ್ತ ತನಿಖೆ ನಡೆಸುವ ಕುರಿತು ಮಾನ್ಯ ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರ ಗಮನ ಸೆಳೆಯುವುದು.</u>

<u>ಗಮನ ಸೆಳೆಯುವ ಸೂಚನೆಗೆ ಸರ್ಕಾರದ ಉತ್ತರ :</u>

ಕರ್ನಾಟಕ ಭೋವಿ ಅಭಿವೃದ್ಧಿ ನಿಗಮವು **29.02.2016** ರಲ್ಲಿ ಸ್ಥಾಪನೆ ಆಗಿರುತ್ತದೆ. ನಿಗಮದಲ್ಲಿ ಈ ಕೆಳಕಂಡವರು ವ್ಯವಸ್ಥಾಪಕ ನಿರ್ದೇಶಕರಾಗಿ ಇದುವರೆಗೂ ಕೆಲಸ ನಿರ್ವಹಿಸಿದ್ದಾರೆ.

1. ಶ್ರೀ ಕೆ.ಸಿ. ಶ್ರೀರಾಮಯ್ಯ ಕೆ.ಎ.ಎಸ್.,
2. ಡಾ:ಎಂ.ಆರ್. ಏಕಾಂತಪ್ಪ
3. ಶ್ರೀ ಶ್ರೀನಿವಾಸಲು, ಐ.ಎಫ್.ಎಸ್.
4. ಶ್ರೀ ಕೆ.ಎನ್. ಸುರೇಶ್ ನಾಯ್ಕ
5. ಡಾ: ಬಿ.ಕೆ. ನಾಗರಾಜಪ್ಪ
6. ಶ್ರೀ ಶ್ರೀನಿವಾಸಲು ಐ.ಎಫ್.ಎಸ್
7. ಶ್ರೀ ಟಿ.ರಾಘವೇಂದ್ರ, ಕೆ.ಎ.ಎಸ್
8. ಶ್ರೀ ಕೆ.ಎಂ. ಪ್ರಸಾದ್
9. ಶ್ರೀಮತಿ ಅರ್ಚನಾ
10. ಶ್ರೀ ಮಾಯಾದೇವಿ ಗಲಗಲಿ
11. ಶ್ರೀಮತಿ ಆರ್. ಲೀಲಾವತಿ
12. ಶ್ರೀ ಯೋಗೀಶ್
13. ಶ್ರೀಮತಿ ಮಂಗಳ ಕೆ.ಎ.ಎಸ್. (ಪ್ರಸ್ತುತ)

ಶ್ರೀ ಎನ್.ನಾರಾಯಣಸ್ವಾಮಿ ಬಿನ್ ನಾರಪ್ಪ, ಎಂ.ಜಿ.ರಸ್ತೆ, ಶ್ರೀನಿವಾಸಪುರ ಪಟ್ಟಣ, ಕೋಲಾರ ಜಿಲ್ಲೆ ಎಂಬುವವರು ಭೋವಿ ಅಭಿವೃದ್ಧಿ ನಿಗಮದಲ್ಲಿ ಸರಿಯಾದ ರೀತಿಯಲ್ಲಿ ಕೆಲಸ ನಿರ್ವಹಿಸದೇ ಇರುವ ಬಗ್ಗೆ ದಿನಾಂಕ:**18.08.2021** ಮತ್ತು **28.09.2021** ರಲ್ಲಿ ದೂರು ನೀಡಿರುತ್ತಾರೆ. ಸದರಿ ದೂರುಗಳ ಬಗ್ಗೆ ಇಲಾಖೆಯಿಂದ ಸಮಿತಿಯನ್ನು ರಚಿಸಲಾಗಿದ್ದು, ಸಮಿತಿಯು ನೀಡಿರುವ ವರದಿಯ ಆಧಾರದ ಮೇರೆಗೆ ಶ್ರೀಮತಿ ಆರ್.ಲೀಲಾವತಿ, ಡಾ:ಬಿ.ಕೆ.ನಾಗರಾಜಪ್ಪ ಮತ್ತು ಶ್ರೀ ಪಿ.ಡಿ. ಸುಬ್ಬಪ್ಪ, ಅಧೀಕ್ಷಕರು ಇವರುಗಳಿಗೆ ಕಾರಣ ಕೇಳುವ ನೋಟೀಸ್‌ನ್ನು ಜಾರಿ ಮಾಡಲಾಗಿರುತ್ತದೆ. ಸಂಬಂಧಪಟ್ಟವರಿಂದ ಪಡೆಯಲಾದ ಸಮಜಾಯಿಷಿಯನ್ನು ಸರ್ಕಾರವು ಒಪ್ಪದೇ ಅವರ ವಿರುದ್ಧ ಇಲಾಖಾ ವಿಚಾರಣೆಯನ್ನು ಕಾಯ್ದಿರಿಸಿ ಸರ್ಕಾರದ ಆದೇಶ ಸಂಖ್ಯೆ: ಸಕಇ

249 ಪಕಸೇ 2021, ದಿನಾಂಕ: 17ನೇ ಡಿಸೆಂಬರ್ 2021 ರಲ್ಲಿ ಜಂಟಿ ಇಲಾಖಾ ವಿಚಾರಣೆ ಬಾಕಿ ಇರಿಸಿ, ಸೇವೆಯಿಂದ ಅಮಾನತ್ತುಗೊಳಿಸಿ ಆದೇಶಿಸಲಾಗಿರುತ್ತದೆ. ಅನಧಿಕೃತ ಟಿಪ್ಪಣಿ ಸಂಖ್ಯೆ: ಸಕಇ 16 ಪಕಸೇ 2022, ದಿನಾಂಕ:10.03.2022 ರಲ್ಲಿ ಹೆಚ್ಚಿನ ತನಿಖೆ ನಡೆಸಲು ಪ್ರಕರಣವನ್ನು ಭ್ರಷ್ಟಾಚಾರ ನಿಗ್ರಹ ದಳಕ್ಕೆ ವಹಿಸಲಾಗಿತ್ತು. ಭ್ರಷ್ಟಾಚಾರ ನಿಗ್ರಹ ದಳವು ಭ್ರಷ್ಟಾಚಾರ ನಿಗ್ರಹ ದಳ, ಬೆಂಗಳೂರು ಪೋಲೀಸ್ ಠಾಣೆ ಮೊಕದ್ದಮೆ ಸಂಖ್ಯೆ: 50/5021 ರಲ್ಲಿ ಶ್ರೀಮತಿ ಆರ್. ಲೀಲಾವತಿ, ವ್ಯವಸ್ಥಾಪಕ ನಿರ್ದೇಶಕರು ಮತ್ತು ಡಾ: ಬಿ.ಕೆ.ನಾಗರಾಜಪ್ಪ, ಪ್ರಧಾನ ವ್ಯವಸ್ಥಾಪಕ ರವರುಗಳ ವಿರುದ್ಧ ಎಫ್.ಐ.ಆರ್. ದಾಖಲಿಸಿದ್ದು, ಇವರುಗಳ ನಿವಾಸ ಮತ್ತು ಕಚೇರಿಗಳ ಮೇಲೆ ರೈಡ್ ಮಾಡಿದ್ದು, ನಂತರ ಬಂಧನಕ್ಕೆ ಒಳಪಡಿಸಿರುತ್ತಾರೆ.

ಸರ್ಕಾರದ ಅಧಿಸೂಚನೆ ಸಂಖ್ಯೆ: ಸಕಇ 249 ಪಕಸೇ 2021, ದಿನಾಂಕ: 17.12.2021 ರಲ್ಲಿ ಶ್ರೀಮತಿ ಆರ್.ಲೀಲಾವತಿ ರವರ ಸೇವೆಯನ್ನು ಸಿ.ಆ.ಸು.ಇಲಾಖೆಗೆ ಹಿಂದಿರುಗಿಸಲಾಗಿರುತ್ತದೆ ಹಾಗೂ ಸಿ.ಆ.ಸು.ಇಲಾಖೆಯು ಇವರನ್ನು ಸೇವೆಯಿಂದ ಅಮಾನತ್ತುಗೊಳಿಸಿರುತ್ತದೆ. ಪ್ರಸ್ತುತ ಶ್ರೀಮತಿ ಮಂಗಳಾ, ಕೆ.ಎ.ಎಸ್. ರವರು ವ್ಯವಸ್ಥಾಪಕ ನಿರ್ದೇಶಕರಾಗಿ ಭೋವಿ ಅಭಿವೃದ್ಧಿ ನಿಗಮದಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ.

ಸನ್ಮಾನ್ಯ ಮುಖ್ಯಮಂತ್ರಿಯವರು ಈ ಪ್ರಕರಣದ ಕುರಿತು ಹೆಚ್ಚಿನ ತನಿಖೆಗಾಗಿ ಸಿ.ಓ.ಡಿ.ಗೆ ವಹಿಸಲು ಆದೇಶಿಸಿದ್ದು, ಸರ್ಕಾರದ ಅನಧಿಕೃತ ಟಿಪ್ಪಣಿ ಸಂಖ್ಯೆ: ಸಕಇ 288 ಎಸ್‌ಎಲ್‌ಪಿ 2022, ದಿನಾಂಕ: 21.12.2022 ರಲ್ಲಿ ಕರ್ನಾಟಕ ಭೋವಿ ಅಭಿವೃದ್ಧಿ ನಿಗಮದಲ್ಲಿ ಸಾರ್ವಜನಿಕ ಹಣವು ದುರುಪಯೋಗವಾಗಿರುವುದರಿಂದ, ವಿವರವಾದ ವಿಚಾರಣೆಗೆ ಪ್ರಕರಣವನ್ನು ಸಿ.ಓ.ಡಿ.ಗೆ (ಆರ್ಥಿಕ ಅಪರಾಧ ವಿಭಾಗ) ಕ್ಕೆ ವಹಿಸಲಾಗಿದೆ. ಸಿ.ಓ.ಡಿ.ಯಿಂದ ತನಿಖಾ ವರದಿ ಬಂದ ನಂತರ ಕಾನೂನು ರೀತ್ಯ ಕ್ರಮ ಜರುಗಿಸಲಾಗುವುದು.

(ಕೋಟಾ ಶ್ರೀನಿವಾಸ ಪೂಜಾರಿ)
ಸಮಾಜ ಕಲ್ಯಾಣ ಮತ್ತು
ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು